ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE: 15/2/2020

ವಿಧಾನಸಭೆ ಕಲಾಪದ ವರದಿಗಾರಿಕೆಗೆ ಪಾಸ್ ನೀಡಲು ನಿರಾಕರಣೆ | ಜಂಟಿ ಅಧಿವೇಶನ ಫೆ.17ರಿಂದ

# ಡಿಜಿಟಲ್ ಮಾಧ್ಯಮ ಮರೆತ ಸರಕಾರ


■ ವಿಶ್ವ ಸುದ್ದಿಲೋಕ ಬೆಂಗಳೂರು

ದೇಶದಲ್ಲಿ ಡಿಜಿಟಲ್ ಮಾಧ್ಯಮದ ಕ್ರಾಂತಿಯಾಗುತ್ತಿದೆ. ಓದುಗರ ಸುದ್ದಿಯ ಹಸಿವನ್ನು ನೀಗಿಸಲು ಕ್ಷಣಕ್ಷಣದ ವಿದ್ಯಮಾನದ ಮಾಹಿತಿ ತಲುಪಿಸುವ ಡಿಜಿಟಲ್ ಮಾಧ್ಯಮಗಳು ಹೆಚ್ಚು ಪ್ರಚಲಿತಕ್ಕೆ ಬರುತ್ತಿವೆ. ಆದರೆ ಇದರ ಬಗ್ಗೆ ಕನಿಷ್ಠ ತಿಳಿವಳಿಕೆ ಇಲ್ಲದಂತೆ ನಡೆದುಕೊಳ್ಳುತ್ತಿರುವ ಸರಕಾರ, ವಿಧಾನಮಂಡಲ ಕಲಾಪದ ವರದಿಗಾರಿಕೆಯಿಂದ ಡಿಜಿಟಲ್ ಮಾಧ್ಯಮದವರಿಗೆ 'ನಿರ್ಬಂಧ' ಹೇರಿದೆ.

ನರೇಂದ್ರ ಮೋದಿಯವರು ಪ್ರಥಮ ಬಾರಿಗೆ ಪ್ರಧಾನಿಯಾದಾಗಲೇ 'ಡಿಜಿಟಲ್ ಇಂಡಿಯಾ' ಘೋಷವಾಕ್ಯ ಮೊಳಗಿಸಿದ್ದರು. ಮಾಧ್ಯಮಗಳಲ್ಲೂ ಬದಲಾವಣೆ ಗಾಳಿ ಬೀಸುತ್ತಿದೆ. ಡಿಜಿಟಲ್ ಪ್ರಪಂಚದಲ್ಲಿ ಮಗ್ಗಲು ಬದಲಿಸಿರುವ ಮಾಧ್ಯಮಗಳು ಇಂಟರ್‌ನೆಟ್ ಆವೃತ್ತಿಯ ಮೂಲಕ ಓದುಗರಿಗೆ ಹೊಸ ಅನುಭವ ಕಟ್ಟಿಕೊಡುತ್ತಿವೆ ಎಂಬ ಕಿಂಚಿತ್ ಜ್ಞಾನವೂ ರಾಜ್ಯ ಸರಕಾರಕ್ಕೆ ಇದ್ದಂತಿಲ್ಲ. ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಾಧ್ಯಮಗಳೂ ಸೇರಿದಂತೆ ಹತ್ತು ಹಲವು ಡಿಜಿಟಲ್ ಮಾಧ್ಯಮ ಸಂಸ್ಥೆಗಳು ಬೆಂಗಳೂರಿನಲ್ಲಿ ಗಟ್ಟಿಯಾಗಿ ನೆಲೆಯೂರುತ್ತಿವೆ. ವಿಶೇಷವಾಗಿ ದಿನಪತ್ರಿಕೆಗಳೂ ಇಂಟರ್‌ನೆಟ್ ಆವೃತ್ತಿಯನ್ನು ಪರಿಣಾಮಕಾರಿಯಾಗಿ ವಿನ್ಯಾಸಗೊಳಿಸಿವೆ. ಪತ್ರಿಕೆಗಳ ವೆಬ್ ಪೋರ್ಟಲ್ ಮೂಲಕ ಓದುಗರಿಗೆ ತಾಜಾ ಸುದ್ದಿ ನೀಡಲಾಗುತ್ತಿದೆ.

## ನೀತಿ ರೂಪಿಸಲು ಹಿಂದೇಟು

ಮೋದಿ ಸರಕಾರ-1ರಲ್ಲಿ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವರಾಗಿದ್ದ ರಾಜವರ್ಧನ್ ಸಿಂಗ್ ರಾಥೋಡ್, ಡಿಜಿಟಲ್ ಮಾಧ್ಯಮದವರಿಗೆ ಸರಕಾರದ ಮಾನ್ಯತಾ ಪತ್ರ ನೀಡುವ ಸಂಬಂಧ ನೀತಿ ರೂಪಿಸುವ ಬಗ್ಗೆ ಪ್ರಸ್ತಾಪಿಸಿದ್ದರು. ನಂತರ ಕೇಂದ್ರವೂ ಈ ನಿಟ್ಟಿನಲ್ಲಿ ಕ್ರಮ ಕೈಗೊಂಡಿಲ್ಲ, ರಾಜ್ಯ ಸರಕಾರಗಳೂ ಒತ್ತಡ ಹೇರುವ ಪ್ರಯತ್ನ ಮಾಡಿಲ್ಲ.



- ಮೋದಿಯಿಂದ ಪ್ರಥಮ ಬಾರಿಗೆ 'ಡಿಜಿಟಲ್ ಇಂಡಿಯಾ' ಘೋಷಣೆ
- ಡಿಜಿಟಲ್ ಮಾಧ್ಯಮ ಸಂಸ್ಥೆಗಳ ಗಟ್ಟಿನೆಲೆ ಬೆಂಗಳೂರು
- ಆದರೂ ಕಲಾಪದ ವರದಿಗಾರಿಕೆಗೆ ಡಿಜಿಟಲ್ ಮಾಧ್ಯಮಕ್ಕಿಲ್ಲ ಅನುಮತಿ
- ನಿಯಮ ತಿದ್ದುಪಡಿಗೂ ಆಸಕ್ತಿ ತೋರದ ವಾರ್ತಾ ಇಲಾಖೆ

ಡಿಜಿಟಲ್ ಮಾಧ್ಯಮ ಈ ಪರಿಯಲ್ಲಿ ಬೆಳೆಯುತ್ತಿದ್ದರೂ ಈ ವಿಭಾಗದಲ್ಲಿ ಕಾರ್ಯ ನಿರ್ವಹಿಸುವವರಿಗೆ ವಿಧಾನಸೌಧ ಸೇರಿದಂತೆ ಸರಕಾರಿ ಪಡಸಾಲೆಯಲ್ಲಿ ವರದಿ ಮಾಡಲು ಅವಕಾಶ ನೀಡಬೇಕು ಎಂಬ ಕಲ್ಪನೆ ಸರಕಾರಕ್ಕೆ ಇನ್ನೂ ಇದ್ದಂತಿಲ್ಲ, ಹಾಗಾಗಿ ಡಿಜಿಟಲ್ ಮಾಧ್ಯಮದವರಿಗೆ ವಿಧಾನಸೌಧಕ್ಕೆ ಪ್ರವೇಶ ನೀಡುತ್ತಿಲ್ಲ!

**ನಿಯಮದ ನೆಪ**

ಈ ಬಾರಿಯ ಜಂಟಿ ಅಧಿವೇಶನ ಹಾಗೂ ಬಜೆಟ್ ಅಧಿವೇಶನ ವರದಿಗಾರಿಕೆಗೆ ಅನುಮತಿ ಪತ್ರ ಕೋರಿ ಪತ್ರಿಕೆಗಳ ಇಂಟರ್‌ನೆಟ್ ಆವೃತ್ತಿಯ ವರದಿಗಾರರು ವಾರ್ತಾ ಇಲಾಖೆಗೆ ಮನವಿ ಪತ್ರ ಸಲ್ಲಿಸಿದ್ದಾರೆ. ಆದರೆ, ವಾರ್ತಾ ಇಲಾಖೆಗೆ ಡಿಜಿಟಲ್ ಪ್ರಪಂಚದ ಬಗ್ಗೆ ಹೆಚ್ಚಿನ ಅರಿವು ಇದ್ದಂತೆ ಕಾಣುವುದಿಲ್ಲ. ಮುದ್ರಣ ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮಗಳಿಗಷ್ಟೇ ಪ್ರವೇಶ. ವೆಬ್‌ಸೈಟ್‌ನವರಿಗೆ ಪಾಸ್ ನೀಡಲು ನಿಯಮಾನುಸಾರ ಸಾಧ್ಯವಿಲ್ಲವೆಂದು ಅಧಿಕಾರಿಗಳು ಸಬೂಬು ಹೇಳುತ್ತಿದ್ದಾರೆ.

ಪ್ರಸಕ್ತ 15ನೇ ರಾಜ್ಯ ವಿಧಾನಸಭೆಯ 6ನೇ ಅಧಿವೇಶನ ಈ ತಿಂಗಳ 17ರಿಂದ ಆರಂಭವಾಗಲಿದೆ. ವರ್ಷಾರಂಭದ ಮೊದಲ ಜಂಟಿ ಅಧಿವೇಶನ ಉದ್ದೇಶಿಸಿ ಸಂಪ್ರದಾಯದಂತೆ ರಾಜ್ಯಪಾಲ ವಜುಭಾಯಿ ವಾಲಾ ಫೆ.17 ರಂದು ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಈ ಬಾರಿ ಒಟ್ಟು 25 ದಿನ ಅಧಿವೇಶನ ನಡೆಯಲಿದೆ. ಮಾರ್ಚ್ 5ರಂದು ಸಿಎಂ ಯಡಿಯೂರಪ್ಪ ಬಜೆಟ್ ಮಂಡಿಸುವರು.

### ಕಲಾಪ ಸಂಕ್ಷಿಪ್ತ ಮಾಹಿತಿ

**6** ನೇ ಕಲಾಪ — ಇದು ಕರ್ನಾಟಕದ 15ನೇ ವಿಧಾನಸಭೆಯ ಕಲಾಪ

ಆರಂಭ ಫೆ. 17 ಸಮಾಪ್ತಿ ಮಾ 31



ಫೆ.17ರಂದು ಬೆಳಗ್ಗೆ 11 ಗಂಟೆಗೆ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲ ವಾಲಾ ಭಾಷಣ

**4** ದಿನ — ಫೆ.17ರಿಂದ ಫೆ.20ರ ತನಕ ಜಂಟಿ ಅಧಿವೇಶನದ ಕಲಾಪ

**19** ದಿನ — ಮಾ.5ರಿಂದ 31ರ ತನಕ ಬಜೆಟ್ ಕಲಾಪ

**2** ದಿನ — ಸಂವಿಧಾನ ಕುರಿತು ವಿಶೇಷ ಚರ್ಚೆ ಮಾ. 2 ಮತ್ತು 3

**ಬಜೆಟ್ ಡೇ**

ಮಾ.5ರಂದು ಬೆಳಗ್ಗೆ 11 ಗಂಟೆಗೆ ಸಿಎಂ ಯಡಿಯೂರಪ್ಪ ಅವರಿಂದ ಬಜೆಟ್ ಮಂಡನೆ





**ಮಂಡನೆಗೆ ಬಾಕಿಯಿರುವ...**

1. ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ)
2. ಕರ್ನಾಟಕ ನಾವೀನ್ಯತಾ ಪ್ರಾಧಿಕಾರ
3. ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ)
4. ಕರ್ನಾಟಕ ರಾಜಭಾಷಾ (ತಿದ್ದುಪಡಿ)
5. ಕರ್ನಾಟಕ ನಗರಪಾಲಿಕೆ (ತಿದ್ದುಪಡಿ)
6. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ (ತಿದ್ದುಪಡಿ)

**ಬಜೆಟ್‌ ಅಂಗೀಕಾರ...**

ಕರ್ನಾಟಕ ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳು ಹಾಗೂ ಹಿಂದುಳಿದ ವರ್ಗಗಳ (ಮೀಸಲು ಮತ್ತು ನೇಮಕ ತಿದ್ದುಪಡಿ ವಿಧೇಯಕ

**ಕಲಾಪ ನಡೆದ ದಿನಗಳು**

ವರ್ಷಕ್ಕೆ ಕನಿಷ್ಠ 60 ದಿನ ಕಲಾಪ ನಡೆಸುವ ಶಾಸನಸಭೆ ಕೈಗೊಂಡ ಸ್ವಯಂ ನಿರ್ಧಾರ 2012 ರಿಂದ ಈವರೆಗೂ ಪಾಲನೆ ಆಗಿಲ್ಲ.

| | | | |
|---|---|---|---|
| 2012-33 | 2013-45 | 2014-53 | 2015-5[illegible] |
| 2016-35 | 2017-40 | 2018-33 | 2019-[illegible] |